ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವಿಷನ್ ಗುಂಪು ಕರ್ನಾಟಕ 2020ಕ್ಕೆ ಸಂಬಂಧಿಸಿದಂತೆ ಮಿಷನ್ ಗುಂಪುಗಳ ರಚನೆ ಬಗ್ಗೆ.

ಓದಲಾಗಿದೆ:

1. ದಿನಾಂಕ:10.10.2008ರ ಸರ್ಕಾರದ ಆದೇಶ ಸಂಖ್ಯೆ : ಪಿಡಿ 59 ಎಸ್‌ಪಿಟಿ 2008.
2. ದಿನಾಂಕ:20.07.2009ರ ಟಿಪ್ಪಣಿ ಸಂಖ್ಯೆ : ಪಿಡಿ 71 ಎಸ್‌ಪಿಟಿ 2009ರಲ್ಲಿ ಹೊರಡಿಸಲಾಗಿರುವ ದಿನಾಂಕ:24.06.2009 ರಂದು ನಡೆದ ಕರ್ನಾಟಕ 2020 ರ ವಿಷನ್ ಗುಂಪಿನ ಸಭೆಯ ನಡವಳಿಗಳು.

ಪ್ರಸ್ತಾವನೆ:

**"ಕರ್ನಾಟಕದ ಅಭಿವೃದ್ಧಿಯ ಒಂದು ದೂರದೃಷ್ಟಿ - ದೂರದೃಷ್ಟಿ 2020"** ಎಂಬ ನಾಮಾಂಕಿತವುಳ್ಳ ರಾಜ್ಯದ ದಾಖಲೆಯನ್ನು ಅಂತಿಮಗೊಳಿಸಲಾಗಿದ್ದು, ಅದನ್ನು ಸಚಿವ ಸಂಪುಟವು ಅನುಮೋದಿಸಿದೆ. ಬಡತನ ನಿವಾರಣೆ, ಅಸಮಾನತೆ ನಿವಾರಣೆ, ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವಿಕೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯ ವೃದ್ಧಿಸುವಿಕೆಯ ಸಲುವಾಗಿ ಈ ದಾಖಲೆಯು ಒಂದು ಕಾಲಬದ್ಧ ಕಾರ್ಯತಂತ್ರವನ್ನು ಪ್ರತಿಪಾದಿಸುತ್ತದೆ. ಈ ದೂರದೃಷ್ಟಿ ದಾಖಲೆಯಲ್ಲಿ ಶಿಫಾರಸ್ಸು ಮಾಡಲಾಗಿರುವ ಅಳೆಯಬಹುದಾದ ಮತ್ತು ಭೌತಿಕ ಗುರಿಗಳನ್ನು ಸಾಧಿಸುವ ಸಲುವಾಗಿ ನಕ್ಷೆ ತಯಾರಿಕೆ ಮತ್ತು ಕಾರ್ಯತಂತ್ರಗಳ ಅನುಷ್ಠಾನ ಇದೀಗ ಅವಶ್ಯವಿದೆ.

ಸರ್ಕಾರದ ಆದೇಶ (ಉಲ್ಲೇಖ 1) ರ ಅನ್ವಯ **"ವಿಷನ್ ಗುಂಪು ಕರ್ನಾಟಕ 2020"** ಇದನ್ನು ರಚಿಸಲಾಗಿದ್ದು, ದಿನಾಂಕ:24.06.2009 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಅದರ ಎರಡನೇ ಸಭೆಯಲ್ಲಿ ದೂರದೃಷ್ಟಿ ದಾಖಲೆಯಲ್ಲಿ ಶಿಫಾರಸ್ಸು ಮಾಡಲಾಗಿರುವ ಪರಿವರ್ತನೆಗಳಿಗಾಗಿ ಅನುಷ್ಠಾನ ಕಾರ್ಯತಂತ್ರ ಕಾರ್ಯ ರೀತಿಯನ್ನು ರೂಪಿಸಲು ಆರು ಮಿಷನ್ ಗುಂಪುಗಳನ್ನು ರಚಿಸಲು ನಿರ್ಣಯಿಸಲಾಗಿದೆ.

ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಪಿಡಿ 71 ಎಸ್‌ಪಿಟಿ 2009, ಬೆಂಗಳೂರು, ದಿನಾಂಕ: 25.07.2009**

ದಿನಾಂಕ:24.06.2009 ರಂದು ನಡೆದ ವಿಷನ್ ಗುಂಪಿನ ಸಭೆಯಲ್ಲಿ ನಿರ್ಣಯಿಸಿದಂತೆ ಆರು ಮಿಷನ್ ಗುಂಪುಗಳನ್ನು ಈ ಕೆಳಗೆ ಕಾಣಿಸಿದ ಉಲ್ಲೇಖ ನಿಬಂಧನೆಗಳೊಂದಿಗೆ ರಚಿಸಲಾಗಿದೆ.

| ಕ್ರಮ ಸಂಖ್ಯೆ | ಮಿಷನ್ ಗುಂಪು | ಅಧ್ಯಕ್ಷರು/ಸದಸ್ಯರು | ಸಂಬಂಧಿತ ಇಲಾಖೆಗಳು |
|---|---|---|---|
| ೧. | ಮಾನವ ಅಭಿವೃದ್ಧಿ | ಡಾ: ಹೆಚ್. ಸುದರ್ಶನ್ - ಅಧ್ಯಕ್ಷರು<br>ಡಾ: ಬಿ.ಎಸ್. ಅಜಯ್ ಕುಮಾರ್ - ಸದಸ್ಯರು<br>ಶ್ರೀ ಎಂ.ಪಿ. ಕುಮಾರ್ - ಸದಸ್ಯರು<br>ಡಾ: ಗೋವಿಂದ ರಾವ್ - ಸದಸ್ಯರು<br>ಡಾ: ಕಸ್ತೂರಿರಂಗನ್ - ಸದಸ್ಯರು<br>ಡಾ: ಆರ್. ಬಾಲಸುಬ್ರಹ್ಮಣ್ಯಂ - ಸದಸ್ಯರು | ಆರೋಗ್ಯ, ಪ್ರಾಥಮಿಕ ಶಿಕ್ಷಣ, ಉನ್ನತ ಶಿಕ್ಷಣ, ಕಾರ್ಮಿಕ, ಕೈಗಾರಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕೃಷಿ |

| | | | |
|---|---|---|---|
| ೩. | ಸಾಮಾಜಿಕ ಸಬಲೀಕರಣ (Social empowerment) | ಡಾ:ಬಿ.ಎಸ್. ಅಜಯ್ ಕುಮಾರ್ - ಅಧ್ಯಕ್ಷರು<br>ಡಾ: ಹೆಚ್. ಸುದರ್ಶನ್ - ಸದಸ್ಯರು<br>ಶ್ರೀ ಬಸವರಾಜ್ ಪಾಟೀಲ್ ಸೇಡಂ- ಸದಸ್ಯರು<br>ಡಾ: ಆರ್. ಬಾಲಸುಬ್ರಹ್ಮಣ್ಯಂ - ಸದಸ್ಯರು | ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆಹಾರ ಮತ್ತು ನಾಗರೀಕ ಸರಬರಾಜು, ಶಿಕ್ಷಣ, ಆರೋಗ್ಯ, ಕಾರ್ಮಿಕ, ಪೋಲೀಸ್ (ಒಳಾಡಳಿತ) |
| ೪. | ಗ್ರಾಮೀಣ ಆರ್ಥಿಕ ಅಭಿವೃದ್ಧಿ | ಪ್ರೊ.ಆರ್.ಎಸ್. ದೇಶಪಾಂಡೆ - ಅಧ್ಯಕ್ಷರು<br>ಶ್ರೀ ಯಲ್ಲಪ್ಪ ರೆಡ್ಡಿ - ಸದಸ್ಯರು<br>ಶ್ರೀ ವಿನಯ್ ಹೆಗ್ಡೆ - ಸದಸ್ಯರು | ಕೃಷಿ, ತೋಟಗಾರಿಕೆ, ಕೃಷಿ ಮಾರುಕಟ್ಟೆ, ಮೀನುಗಾರಿಕೆ, ಪಶುಸಂಗೋಪನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್. ರಾಜ್, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ನೀರಾವರಿ, ಕಾರ್ಮಿಕ, ಗಣಿಗಾರಿಕೆ |
| ೫. | ಮೂಲಭೂತ ಸೌಲಭ್ಯ ಮತ್ತು ಕೈಗಾರಿಕಾ ಅಭಿವೃದ್ಧಿ | ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ - ಅಧ್ಯಕ್ಷರು<br>ಶ್ರೀ ಟಿ.ವಿ. ಮೋಹನದಾಸ್ ಪೈ - ಸದಸ್ಯರು<br>ಶ್ರೀ ನಂದನ್ ನಿಲೇಕಣಿ - ಸದಸ್ಯರು<br>ಶ್ರೀ ಪಂಕಜಚಂದ್ರ - ಸದಸ್ಯರು<br>ಶ್ರೀ ವಿಜಯ ಸಂಕೇಶ್ವರ್ - ಸದಸ್ಯರು | ನಗರಾಭಿವೃದ್ಧಿ, ಕೈಗಾರಿಕೆ, ಇಂಧನ, ಲೋಕೋಪಯೋಗಿ, ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ತಾಂತ್ರಿಕ ಶಿಕ್ಷಣ. |
| ೬. | ವಿಕೇಂದ್ರೀಕರಣ ಮತ್ತು ಆಡಳಿತ | ಡಾ: ಗೋವಿಂದರಾವ್ - ಅಧ್ಯಕ್ಷರು<br>ಪ್ರೊ. ಆರ್.ಎಸ್. ದೇಶಪಾಂಡೆ - ಸದಸ್ಯರು<br>ಡಾ: ಹೆಚ್. ಸುದರ್ಶನ್ - ಸದಸ್ಯರು<br>ಡಾ: ಸಾಮ್ಯುಯಲ್ \|ಪೌಲ್ - ಸದಸ್ಯರು | ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್. ರಾಜ್, ನಗರಾಭಿವೃದ್ಧಿ, ಇ-ಆಡಳಿತ, ಆರ್ಥಿಕ |
| ೭. | ಕರ್ನಾಟಕ ಪರಂಪರೆ | ಶ್ರೀ ಯಲ್ಲಪ್ಪರೆಡ್ಡಿ - ಅಧ್ಯಕ್ಷರು<br>ಶ್ರೀ ಎಂ.ಪಿ. ಕುಮಾರ್ - ಸದಸ್ಯರು | ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ, ರೇಷ್ಮೆ, ಕೈಮಗ್ಗ ಮತ್ತು ನೇಯ್ಗೆ, ಕ್ರೀಡೆ ಮತ್ತು ಯುವಜನ ಸೇವೆಗಳು, ಕೈಗಾರಿಕೆ, |

(1)

(2) ಪ್ರತಿಯೊಂದು ಮಿಷನ್ ಗುಂಪು ಸಂಬಂಧಿತ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರನ್ನು ಸದಸ್ಯರನ್ನಾಗಿಯೂ ಸಹ ಸೇರ್ಪಡೆ ಮಾಡಿಕೊಂಡಿರಬೇಕು. ಸಭೆಗಳಲ್ಲಿ ಚರ್ಚೆಯ ವಿಷಯದ ಅವಲಂಬನೆಯ ಮೇಲೆ, ಪ್ರತಿಯೊಂದು ಮಿಷನ್ ಗುಂಪು ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರನ್ನು ಆ ಗುಂಪಿನ ಸಹ-ಅಧ್ಯಕ್ಷರನ್ನಾಗಿ ಸಹ ಆಯ್ಕೆ ಮಾಡಿಕೊಳ್ಳಬೇಕು.

(3) ಪ್ರತಿಯೊಂದು ಮಿಷನ್ ಗುಂಪೂ ಸಹ ವಿಷಯ ತಜ್ಞರು ಮತ್ತು ವೃತ್ತಿದಾರರನ್ನು ಸದಸ್ಯರಂತೆ ಸಹ ಆಯ್ಕೆ ಮಾಡಿಕೊಳ್ಳಬಹುದು.

(4) ಮಿಷನ್ ದಾಖಲೆಯಲ್ಲಿ ಪ್ರತಿಯೊಂದು ವಲಯಗಳಡಿಯಲ್ಲಿ ಶಿಫಾರಸ್ಸು ಮಾಡಿರುವ ಗುರಿಗಳು/ಫಲಿತಾಂಶಗಳನ್ನು ಡಿಸೆಂಬರ್, 2009 ರೊಳಗಾಗಿ ಸಾಧಿಸಲು ಅಲ್ಪಾವಧಿ (ಒಂದು ವರ್ಷ), ಮಧ್ಯಮಾವಧಿ (ಮೂರು ವರ್ಷಗಳು) ಮತ್ತು ದೀರ್ಘಾವಧಿ (ಮೂರು ವರ್ಷಗಳನ್ನು ಮೀರಿ) ಇವುಗಳಿಗೆ ಕ್ರಿಯಾ ಯೋಜನೆಗಳನ್ನು ರೂಪಿಸುವ ಜವಾಬ್ದಾರಿ ಮಿಷನ್ ಗುಂಪುಗಳದ್ದಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ,

27/7/09
(ಉಷಾಬಾಯಿ)

ಸರ್ಕಾರದ ಅಧೀನ ಕಾರ್ಯದರ್ಶಿ-3
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು
3. ಮಾನ್ಯ ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ, ವಿಕಾಸ ಸೌಧ, ಬೆಂಗಳೂರು
4. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು
6. ಮಿಷನ್ ಗುಂಪಿನ ಎಲ್ಲಾ ಸದಸ್ಯರು.
7. ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
8. ಮಾನ್ಯ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು, ವಿಧಾನ ಸೌಧ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ವಿಶೇಷಾಧಿಕಾರಿ, ಆರ್ಥಿಕ ಇಲಾಖೆ(ಬಿ.ಮಂ), ವಿಧಾನ ಸೌಧ, ಬೆಂಗಳೂರು.
11. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ಸಹಾಯಕ ಖಜಾನಾಧಿಕಾರಿ, ರಾಜ್ಯ ಯೋಜನಾ ಮಂಡಳಿ.
13. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ